ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : ೨೫೭೫

ಮಾನ್ಯ ಸದಸ್ಯರ ಹೆಸರು : ಶ್ರೀ ಸರೀಕಾರ್ ಭೀಮಪ್ಪ ಚನ್ನಪ್ಪ (ರಾಯಭಾಗ)

ಉತ್ತರಿಸುವರು : ಶ್ರೀ ಹೆಚ್.ಡಿ. ರೇವಣ್ಣ
(ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಕ್ರ.ಸಂ. ಪ್ರಶ್ನೆ

ಅ) ಬೆಂಗಳೂರು ಮೈಸೂರು ಕಾರಿಡಾರ್ ಯೋಜನೆಯಡಿ ರೈತರಿಂದ ಎಷ್ಟು ಎಕರೆ ಜಮೀನನ್ನು ವಶಪಡಿಸಿಕೊಳ್ಳಲಾಗಿದೆ?

ಉತ್ತರ

ಬೆಂಗಳೂರು ಮೈಸೂರು ಕಾರಿಡಾರ್ ಯೋಜನೆಯ ಮೊದಲನೇ ಹಂತದ ೪೧ ಕಿ.ಮೀ. ಉದ್ದದ ಪೆರಿಪೆರಲ್ ರಸ್ತೆ ಮತ್ತು ೯.೧ ಕಿ.ಮೀ. ಉದ್ದದ ಲಿಂಕ್ ರಸ್ತೆ ಹಾಗೂ ಎಂಟು ಇಂಟರ್‌ಚೇಂಜ್‌ಗಳನ್ನೊಳಗೊಂಡ ಕಾಮಗಾರಿಗಳಿಗೆ ಕೆಐಎಡಿಬಿ ಸಂಸ್ಥೆಯು ೨,೫೬೬ ಎಕರೆ ಖಾಸಗಿ ಜಮೀನಿಗೆ ಅಂತಿಮ ಅಧಿಸೂಚನೆ ಹೊರಡಿಸಲಾಗಿದ್ದು ಈವರೆವಿಗೂ ೧,೦೧೧ ಎಕರೆ ಜಮೀನನ್ನು ಕಂಪನಿಯ ವಶಕ್ಕೆ ಹಸ್ತಾಂತರಿಸಲಾಗಿದೆ.

ಕ್ರ.ಸಂ. ಪ್ರಶ್ನೆ

ಆ) ಈ ಜಮೀನಿನಲ್ಲಿ ರಾಷ್ಟ್ರೀಯ ಹೆದ್ದಾರಿಗೆ ಎಷ್ಟು ಎಕರೆ ಜಮೀನು ಹಾಗೂ ಟೌನ್‌ಷಿಪ್‌ಗಾಗಿ ಎಷ್ಟು ಎಕರೆ ಜಮೀನನ್ನು ಖರೀದಿಸಲಾಗಿದೆ?

ಉತ್ತರ

ಆ) ಸದರಿ ಯೋಜನೆಯನ್ನು ಮೊದಲನೇ ಹಂತದ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಈಗಾಗಲೇ ಸರ್ಕಾರವು ರಚಿಸಿರುವ ಪರಿಣಿತರ ಸಮಿತಿಯು ಅಂತಿಮ ವರದಿಯನ್ನಾಧರಿಸಿ ಜಮೀನುಗಳ ವಿಸ್ತೀರ್ಣವನ್ನು ನಿಗದಿಪಡಿಸಲಾಗುವುದು. ಹಾಗೂ ಬಡದಿ ಬಳಿ ಯೋಜನೆಯ ಮೊದಲನೇ ಹಂತದ ಒಂದು ಉಪನಗರ ನಿರ್ಮಿಸಲು ಹಾಗೂ ಬಡದಿಯವರೆಗಿನ ೧೨ ಕಿ.ಮೀ. ಉದ್ದದ ವೇಗದ ಹೆದ್ದಾರಿ ಹಾಗೂ ಎರಡು ಇಂಟರ್‌ಚೆಂಜ್ ಗಳನ್ನೊಳಗೊಂಡ ಕಾಮಗಾರಿಗಳಿಗೆ ಪರಿಣಿತರ

ಸಮಿತಿಯ ಅಂತಿಮ ವರದಿಯನ್ನಾಧರಿಸಿ ಜಮೀನುಗಳನ್ನು ನಿಗದಿಪಡಿಸಿ ಸಧ್ಯದಲ್ಲಿಯೇ ಕೆಐಎಡಿಬಿ ಸಂಸ್ಥೆಯು ಅಂತಿಮ ಅಧಿಸೂಚನೆ ಹೊರಡಿಸಲು ಮುಂದಿನ ಕ್ರಮವನ್ನು ಕೈಗೊಳ್ಳಲಾಗುವುದು.

ಕ್ರ.ಸಂ.	ಪ್ರಶ್ನೆ
೫)	ಉಚ್ಚನ್ಯಾಯಾಲಯವು ಟೌನ್‌ಶಿಪ್‌ಗಾಗಿ ವಶಪಡಿಸಿಕೊಂಡಿರುವ ಜಮೀನನ್ನು ಪುನಃ ರೈತರಿಗೆ ಕೊಡುವಂತೆ ಆದೇಶ ಮಾಡಲಾಗಿದೆಯೇ?

ಉತ್ತರ

೫) ದಿನಾಂಕ: ೧೮.೧೨.೨೦೦೩ರಂದು ಕರ್ನಾಟಕ ಉಚ್ಚನ್ಯಾಯಾಲಯದ ಏಕ ಪೀಠ ನ್ಯಾಯಾಧೀಶರು ನೀಡಿದ ತೀರ್ಪನ್ನು ರದ್ದುಗೊಳಿಸಿ ಸದರಿ ನ್ಯಾಯಾಲಯದ ವಿಭಾಗೀಯ ಪೀಠವು ದಿ. ೨೮.೦೨.೨೦೦೫ರಂದು ನೀಡಿರುವ ತೀರ್ಪಿನ ಹಿನ್ನೆಲೆಯಲ್ಲಿ ಬಡದಿ ಬಳಿ ನಿರ್ಮಿಸಲು ಉದ್ದೇಶಿಸಿರುವ ಟೌನ್‌ಶಿಪ್‌ಗೆ ವಶಪಡಿಸಿಕೊಳ್ಳುತ್ತಿರುವ ಜಮೀನುಗಳನ್ನು ಪುನಃ ರೈತರಿಗೆ ಹಿಂತಿರುಗಿಸುವ ಪ್ರಶ್ನೆಯೇ ಉದ್ಭವಿಸುವುದಿಲ್ಲ.

ಕ್ರ.ಸಂ.	ಪ್ರಶ್ನೆ
ಉ)	ಹಾಗಿದ್ದಲ್ಲಿ, ಸದರಿ ಜಮೀನನ್ನು ರೈತರಿಗೆ ಯಾವಾಗ ವಾಪಸ್ಸು ಮಾಡಲಾಗುವುದು?

ಉತ್ತರ

ಉ) ಸದರಿ ಬಿಎಂಐಸಿ ಯೋಜನೆಯ ರಸ್ತೆ ಕಾಮಗಾರಿಗಳ ಹಾಗೂ ಉಪನಗರಗಳ ನಿರ್ಮಾಣ ಸಂಬಂಧ ರಾಜ್ಯ ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠವು

ನೀಡಿರುವ ತೀರ್ಪಿನ ಹಿನ್ನೆಲೆಯಲ್ಲಿ ಸ್ವಾಧೀನಪಡಿಸಿಕೊಂಡಿರುವ ಹಾಗೂ ಮುಂದೆ ಸ್ವಾಧೀನಪಡಿಸುವ ಹೆಚ್ಚುವರಿ ಖಾಸಗಿ ಜಮೀನುಗಳನ್ನು ರೈತರಿಗೆ ಹಿಂತಿರುಗಿಸಿರುವ ಬಗ್ಗೆ ಸರ್ಕಾರವು ರಚಿಸಿರುವ ಪರಿಣಿತರ ಸಮಿತಿಯ ಅಂತಿಮ ವರದಿಯನ್ನು ಗಮನಿಸಿ ಮುಂದಿನ ಕ್ರಮ ಜರುಗಿಸಲಾಗುವುದು.

೨೮.೩.೦೫ (ಟಿಎ)

ಶ್ರೀ ಸರೀಕಾರ್ ಭೀಮಪ್ಪ ಚನ್ನಪ್ಪ (ರಾಯಭಾಗ) : ಮಾನ್ಯ ಸಚಿವರೆ ತಾವು ಉತ್ತರವನ್ನೇನೋ ಕೊಟ್ಟಿದ್ದೀರಿ. ಆದರೂ ನೆಲಮಂಗಲದ ಬಳಿ ಮಾದವನಹಳ್ಳಿಗೆ ಸೇರಿದ ಇಂಟರ್‌ಚೇಂಜ್ ಆಚೆಗೆ ಇರುವ ಒಂದು ಜಮೀನಿನಲ್ಲಿ ೩೦ ಎಕರೆ ಪ್ರದೇಶಕ್ಕೆ ಸರ್ಕಾರ ತಂತಿಬೇಲಿಯನ್ನು ಹಾಕುತ್ತಾರೆ. ಅದು ಸರಿಯೇ? ಸರಿ ಇದ್ದರೆ ತಾವು ಉತ್ತರ ಕೊಟ್ಟಿದ್ದು ಸರಿ ಇದೆ ಎಂದು ಮಾನ್ಯ ಸಚಿವರು ತಿಳಿಸಬೇಕೆಂದು ಕೇಳುತ್ತೇನೆ.

ಶ್ರೀ ಜೆ.ಸಿ.ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೆ, ನಾನೊಂದು ಪೂರಕ ಪ್ರಶ್ನೆಯನ್ನು ಕೇಳಬಯಸುತ್ತೇನೆ.

ಅಧ್ಯಕ್ಷರು : ಕೇಳಿ.

ಶ್ರೀ ಜೆ.ಸಿ. ಮಾಧುಸ್ವಾಮಿ: ಮಾನ್ಯ ಅಧ್ಯಕ್ಷರೆ, ಎಕ್ಸ್‌ಪರ್ಟ್ಸ್ ಕಮಿಟಿ ರಿಪೋರ್ಟ್‌ನ್ನು ಈ ಸದನದಲ್ಲಿ ಕೀ ಮಾಡುತ್ತಾರೆಯೇ ಎಂಬ ಬಗ್ಗೆ ಮಾನ್ಯ ಸಚಿವರು ಹೇಳಬೇಕು. ಏಕೆಂದರೆ ಮಾನ್ಯ ಸಚಿವರೇ ಎಕ್ಸ್‌ಪರ್ಟ್ಸ್ ಕಮಿಟಿಯನ್ನು ಮಾಡಿದ್ದೇವೆ, ಅದರ ವರದಿಯನ್ನಾಧರಿಸಿಯೇ ಬೆಂಗಳೂರಿನಲ್ಲಿ ಯಾವ ಯಾವ ಜಮೀನನ್ನು ಡಿನೋಟಿಫೈ ಮಾಡಬೇಕು ಎಂದು ಹೇಳುತ್ತೇವೆ ಎಂದು ಹೇಳಿದ್ದರು. ಆದುದರಿಂದ ದಯಮಾಡಿ ಆ ವರದಿಯನ್ನು ಸದನದಲ್ಲಿ ಇಡುತ್ತೀರ? ಇನ್ನು ಎರಡನೆಯದಾಗಿ ಈಗ ಹೇಳಿದಂತೆ ನಮ್ಮ ಸರ್ಕಾರ ಮಾದವಪುರ ಅಥವಾ ನೆಲಮಂಗಲದ ಆಚೆಗೆ ನೀವೇನು ೩೦ ಎಕರೆಗೆ ಇಂಟರ್‌ಚೇಂಜ್ ಆಚೆ ಇರುವ ಜಾಗಕ್ಕೆ ಇವೊತ್ತು ಫೆನ್ಸಿಂಗ್ ಮಾಡುತ್ತಿದ್ದೀರಿ. ಆದರೆ ಬೆಂಗಳೂರು-ಮೈಸೂರು ಕಾರಿಡಾರ್‌ಗೆ ಇದು ಸಂಬಂಧವಿಲ್ಲವೆಂದು ಹೇಳಿದ್ದಾರೆ. ಅದೂ ಅಲ್ಲದೇ ಹೈಕೋರ್ಟ್ ಸ್ಟೇಟಸ್ಕೋ ಮೆಂಟೇನ್ ಮಾಡಬೇಕೆಂದು ಆದೇಶ ಕೊಟ್ಟಿದೆ. ಆದೇಶ ಇದ್ದರೂ ಜಮೀನು ಅಕ್ವೈರ್ ಮಾಡುವುದಕ್ಕೆ ಪೊಜಿಷನ್ ಕೊಡಿಸುತ್ತಿದ್ದೀರಿ? ತಾವು ದಯವಿಟ್ಟು ಇವರ ಬಗ್ಗೆ ಹೇಳಬೇಕು.

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಸಚಿವರು): ಮಾನ್ಯ ಅಧ್ಯಕ್ಷರೆ, ಈಗ ನನಗೆ ಕಳುಹಿಸಿರುವ ಪ್ರಶ್ನೆಯಲ್ಲಿ ಈ ಪ್ರಶ್ನೆ ಇಲ್ಲ.

ಶ್ರೀ ಜೆ.ಸಿ.ಮಾಧುಸ್ವಾಮಿ: ಆ ಪ್ರಶ್ನೆ ಇಲ್ಲದೇ ಇರುವುದರಿಂದ ನಾನು ಪೂರಕ ಪ್ರಶ್ನೆಯನ್ನು ಕೇಳುತ್ತಿರುವುದು.

ಶ್ರೀ ಹೆಚ್.ಡಿ.ರೇವಣ್ಣ (ಲೋಕೋಪಯೋಗಿ ಸಚಿವರು): ಆ ಡೀಟೈಲ್ಸ್ ಬೇಕಾದರೆ ನಾನು ತರಿಸಿಕೊಡುತ್ತೇನೆ. ಏಕೆಂದರೆ ನನಗೆ ಆ ವಿಷಯ ಗೊತ್ತಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಸಚಿವರೆ, ಆ ಎಕ್ಸ್‌ಪರ್ಟ್ ಕಮಿಟಿ ವರದಿಯನ್ನು ನೀವು ಸದನದಲ್ಲಿ ರೀ ಮಾಡುತ್ತೀರ? ಸದನದಲ್ಲಿ ಆ ವರದಿಯನ್ನು ಇಡುವುದಕ್ಕಾಗುತ್ತದೆಯೋ ಅಥವಾ ಇಲ್ಲವೋ ಎಂಬ ಬಗ್ಗೆ ಹೇಳಬಹುದು. ಅದಕ್ಕೇನು ಉತ್ತರ ತರಿಸಿಕೊಳ್ಳಬೇಕು ಎಂದೇನಿಲ್ಲ.

ಶ್ರೀ ಹೆಚ್.ಡಿ.ರೇವಣ್ಣ: ನಾನು ಹೇಳಿದ್ದು ೩೦ ಎಕರೆ ವಿಚಾರಕ್ಕೆ ಸಂಬಂಧಪಟ್ಟಂತೆ.

ಶ್ರೀ ಆರ್. ಅಶೋಕ್: ಮಾನ್ಯ ಅಧ್ಯಕ್ಷರೆ, ಮಾನ್ಯ ರೆವಿನ್ಯೂ ಮಂತ್ರಿಗಳು ಏನು ಎಕ್ಸಸ್ ಲ್ಯಾಂಡ್ ಇದೆ ಅದನ್ನು ಕೊಡುವುದಿಲ್ಲವೆಂದು ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ. ಆದರೆ ನಿಮ್ಮ ಉತ್ತರದಲ್ಲಿ ಅದು ಇಲ್ಲವೇ ಇಲ್ಲ, ಅದಕ್ಕೇ ನಾವು ಕೇಳುತ್ತಿರುವುದು, ಕೇಳಿರುವುದಕ್ಕಿಂತ ಹೆಚ್ಚು ಲ್ಯಾಂಡ್‌ನ್ನು ಎಕ್ಸಸ್ ಕೊಟ್ಟಿದ್ದೀರಿ. ಆ ರೀತಿ ಕೊಡುವುದಕ್ಕೆ ಯಾರು ಕಾರಣ? ಇದರ ಬಗ್ಗೆ ಸದನದಲ್ಲಿ ವರದಿ ಇಡಿ.

ಶ್ರೀ ಜೆ.ಸಿ. ಮಾಧುಸ್ವಾಮಿ: ಮಾನ್ಯ ಸಚಿವರೆ, ಇದು ಪೂರಕ ಇಲಾಖೆ. ತಾವೇ ಹೇಳಿರುವುದು. ಇಂಟರ್ ಎಕ್ಸ್‌ಚೇಂಜ್‌ನ್ನು ಒಳಗೊಂಡ ಕಾಮಗಾರಿಗಳಿಗೆ ಪರಿಣಿತರ ಸಮಿತಿಯ ಅಂತಿಮ ವರದಿಗಳನ್ನಾಧರಿಸಿ ಜಮೀನುಗಳನ್ನು ನಿಗಧಿಪಡಿಸಿ ಎಂದು ತಾವು ಹೇಳಿರುವುದಕ್ಕೆ ನಾವು ಇಂದು ಕೇಳುತ್ತಿದ್ದೇವೆ. ನೀವು ಸಂಬಂಧವಿಲ್ಲವೆಂದು ಹೇಳುವುದಕ್ಕೆ ಬರುವುದಿಲ್ಲ. ಆ ಕಮಿಟಿಯಲ್ಲಿರುವ ಶಿಫಾರಸ್ಸಿನಲ್ಲಿ ಇಂಟರ್‌ಚೇಂಜ್ ಏರಿಯಾದಿಂದ ಆಚೆ ಇರುವ ಜಾಗಗಳನ್ನು ನಾವು ಕೆಐಎಡಿಬಿಗೆ ಡಿಲೀಟ್ ಮಾಡಿಸುತ್ತೇವೆ, ಡಿನೋಟಿಪೈ ಮಾಡಿಸುತ್ತೇವೆ ಎನ್ನುವ ಉತ್ತರವನ್ನು ಕೊಟ್ಟಿದ್ದೀರಿ. ಮಾದನಾಯಕನಹಳ್ಳಿಯಲ್ಲಿ ಏನು ಇವೊತ್ತು ೩೦ ಎಕರೆಗೆ ಬೇಲಿ ಹಾಕುತ್ತಿದ್ದೀರಿ. ಆದರೆ ಅಲ್ಲಿ ಅದು ಇಂಟರ್‌ಚೇಂಜ್ ಏರಿಯಾದಿಂದ ಆಚೆ ಇದೆ. ಸ್ಪಷ್ಟವಾಗಿದೆ. ಇಲ್ಲಿ ಕಮಿಟಿ ರಿಪೋರ್ಟ್‌ನ್ನು ಇಡಿ ದಯವಿಟ್ಟು ಯಾವಯಾವ ಜಮೀನು ಬಿಡಬೇಕು, ಯಾವ ಯಾವ ಆಧಾರದ ಮೇಲೆ ಬಿಡಬೇಕು ಎಂಬುದು ನಮಗೆ ಅರ್ಥವಾಗಲಿ. ಏಕೆಂದರೆ ನಾವೇ ಇದನ್ನೆಲ್ಲಾ ರೈಸ್ ಮಾಡಿ ಇಲ್ಲಿ ಮಾತನಾಡಿದ್ದೇವೆ. ಆದುದರಿಂದ ಆ ರಿಪೋರ್ಟ್‌ನ್ನು ತಾವು ಇಲ್ಲಿ ಇಡಬೇಕು. Because

you have made a mention of the committee. ಕಮಿಟಿ ಮಾಡಿದ್ದೇವೆ. ಎಂದು ತಾವು ಹೇಳಿದ್ದೀರಿ. ವರದಿ ಇಡಬೇಕು. ವರದಿಯಲ್ಲಿ ಆಚೆ ಇರುವ ಜಮೀನುಗಳನ್ನೆಲ್ಲಾ ತಕ್ಷಣ ರೈತರಿಗೆ ವಾಪಸ್ಸು ಕೊಡಿಸುತ್ತೀರ ಎಂದು ನಾನು ಕೇಳಬಯಸುತ್ತೇನೆ.

೨೮.೩.೦೫ (೮ಸಿ)

ಶ್ರೀ ಆರ್.ಅಶೋಕ್: ಮಾನ್ಯ ಅಧ್ಯಕ್ಷರೆ, ಈಗಾಗಲೇ ಮಾನ್ಯ ರೆವಿನ್ಯೂ ಮಂತ್ರಿಗಳು ಒಂದು ಸ್ಟೇಟ್‌ಮೆಂಟನ್ನು ಮಾಡಿದ್ದಾರೆ. ಎಕ್ಸ್‌ಸ್ ಲ್ಯಾಂಡ್ ಏನಿದೆ ಅದನ್ನು ನಾವು ಕೊಡುವುದಿಲ್ಲ ಎಂದು ಅವರು ಹೇಳಿರುವುದನ್ನು ನಾವು ಪತ್ರಿಕೆಗಳಲ್ಲಿ ಓದಿದ್ದೇವೆ. ಆದರೆ ಉತ್ತರದಲ್ಲಿ ಅದರ ಬಗ್ಗೆ ಆ ಪ್ರಸ್ತಾವನೆಯೇ ಇಲ್ಲ, ಕೋರ್ಟಿನಲ್ಲಿದೆ, ಅದರ ಬಗ್ಗೆ ಇನ್ನೂ ಏನೇನೋ ಡೀಟೈಲ್ಸ್ ಕೊಟ್ಟಿದ್ದಾರೆ. ಇಲ್ಲಿ ನಮ್ಮ ಪ್ರಶ್ನೆ ಏನೆಂದರೆ, ನಾವು ವಿಧಾನಸಭೆಯಲ್ಲಿ ಅದರ ಬಗ್ಗೆ ನಾವು ಮಾತನಾಡಲೇಬಾರದು ಎನ್ನುವಂತಿದೆ. ಏಕೆಂದರೆ ನಾವೇನಾದರೂ ಅದರ ಬಗ್ಗೆ ಮಾತನಾಡಿದರೆ ನಮ್ಮ ಜಮೀನು ಅಲ್ಲಿದೆ ಎಂದು ಹೇಳುತ್ತಾರೆ. ಅಲ್ಲಿ ಯಾರ ಯಾರ ಜಮೀನು ಇದೆ ಎಂಬ ಬಗ್ಗೆ ತನಿಖೆಯಾಗಲಿ. ನಾಸ್ ಕಂಪನಿ ಫೇರ್ಮನ್ ಮೀಡಿಯಾ ಮುಂದೆ ಒಂದು ಸ್ಟೇಟ್‌ಮೆಂಟ್ ಮಾಡಿದ್ದಾರೆ. ಎಷ್ಟು ಧೈರ್ಯ ಇವರಿಗೆ, ಏಕೆ ಮಾಡಿದ್ದಾರೆ? ಯಾರದಿದೆ ಎನ್ನುವುದಾದರೂ ಬೇಕಲ್ಲ, ಇವರ ಬೆದರಿಕೆಗೆ ನಾವು ಹೆದರಿಬಿಡಬೇಕೆ? ಎಷ್ಟು ಜನರದ್ದು ಇದೆ ಎಂಬ ಬಗ್ಗೆ ಅವರು ಹೇಳಲಿ. ನಾವೇನಾದರೂ ಆ ಬಗ್ಗೆ ವಿಧಾನಸಭೆಯಲ್ಲಿ ಮಾತನಾಡಿದರೆ ನಿಮ್ಮ ಜಮೀನು ಅಲ್ಲಿ ಇದೆ ಎಂದು ಅವರು ಹೇಳುತ್ತಾರೆ. ಸರ್ಕಾರ ಅವರಿಗೆ ಈ ರೀತಿ ಮಾಡುವುದಕ್ಕೆ ಪರ್ಮಿಶನ್ ಕೊಟ್ಟಿದೆಯೆ? ಎರಡನೆಯದಾಗಿ ನಾನು ಹೇಳುವುದೇನೆಂದರೆ ಈಗಾಗಲೇ ಇರುವ ಮೈಸೂರು ರಸ್ತೆಯನ್ನು ಅಭಿವೃದ್ಧಿ ಮಾಡಲಾಗುತ್ತಿದೆ. ಇಲ್ಲಿ ಯಾವುದೇ ಹೆವಿ ವೆಹಿಕಲ್ಸ್ ಓಡಾಡುವುದಿಲ್ಲ, ಕೇವಲ ಪ್ರವಾಸಿಗರು ಮಾತ್ರ ಮೈಸೂರು-ಬೆಂಗಳೂರು ರಸ್ತೆಯಲ್ಲಿ ಓಡಾಡುವಂಥದ್ದು. ಈಗಾಗಲೇ ಡಬಲೀಕರಣ ಮಾಡುತ್ತಿರುವುದರಿಂದ ಅದೇ ಒಳ್ಳೆಯ ರಸ್ತೆ ಆಗುತ್ತದೆ. ಮೈಸೂರು-ಬೆಂಗಳೂರು ಕಾರಿಡಾರ್ ರಸ್ತೆಯಿಂದ ನಮಗೆ ಯಾವುದೇ ಉಪಯೋಗ ಇಲ್ಲ, ನಮಗೆ ಯಾವುದೇ ವಿದೇಶದಿಂದ ಬಂಡವಾಳ ಬರುತ್ತಿಲ್ಲ, ನಾವು ಇವೊತ್ತು ೧೦ ರೂಪಾಯಿಗೆ ಕೊಟ್ಟು ಬಿಟ್ಟಿದ್ದೇವೆ. ೧೦ ರೂಪಾಯಿಗೆ ಕೊಟ್ಟಿರುವ ಜಮೀನಿಗೆ ೧೫೦ ಕೋಟಿ ಸಾಲ ತೆಗೆದುಕೊಂಡು ನಮ್ಮನ್ನೇ, ಅದೇನೋ ಹೇಳುತ್ತಾರೆ ಛಾವಟಿ ಇಲ್ಲದೆಯೇ ಬುಗರಿ ಆಡಿಸುತ್ತಿದ್ದಾರೆ ಎನ್ನತಕ್ಕಂಥ ರೀತಿಯಲ್ಲಿ....

ಅಧ್ಯಕ್ಷರು : ಮಾನ್ಯ ಅಶೋಕ್‌ರವರೆ, ಈಗಾಗಲೇ ಇದರ ಬಗ್ಗೆ ಈ ಸದನದಲ್ಲಿ ಅನೇಕ ಬಾರಿ ಚರ್ಚೆಯಾಗಿದೆ.

ಶ್ರೀ ಆರ್.ಅಶೋಕ್ : ಚರ್ಚೆಯಾದಾಗ ಪ್ರತಿಭಟನೆಯನ್ನು ಮಾಡುವುದಕ್ಕೂ ಬಿಡಲಿಲ್ಲವಲ್ಲ, ಪ್ರತಿಭಟನೆಯನ್ನೂ ಮಾಡುವುದಕ್ಕೆ ಬಿಡಲಿಲ್ಲ.

ಶ್ರೀ ಜಿ.ಎ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ನಮ್ಮದಂತೂ ರಸ್ತೆ ಮಾಡುವುದಕ್ಕೆ ವಿರೋಧವಿಲ್ಲ, ಇದು ಒಂದು. ಇನ್ನು ಎರಡನೆಯದಾಗಿ ಆ ಎಕ್ಸ್‌ಪರ್ಟ್ ಕಮಿಟಿ ರಿಪೋರ್ಟನ್ನು ಸದನದಲ್ಲಿ ಪ್ಲೇಸ್ ಮಾಡುತ್ತೀರ ಎಂಬ ಬಗ್ಗೆ ಹೇಳಬೇಕು. ಇನ್ನು ಮೂರನೆಯದಾಗಿ ಎಕ್ಸಸ್ ಲ್ಯಾಂಡನ್ನು ಏನು ತೆಗೆದುಕೊಳ್ಳಲಾಗಿದೆ ಅದನ್ನು ರೈತರುಗಳಿಗೇ ವಾಪಸ್ಸು ಕೊಡುತ್ತೇವೆ ಎಂದು ಏನು ಹೇಳಿದ್ದೀರಿ ಅದನ್ನು ವಾಪಸ್ ಕೊಡುವುದರ ಬದಲು ಆ ಲ್ಯಾಂಡ್ ಮೇಲೆ ತಾವು ಬೇಲಿ ಹಾಕಿಸುತ್ತಿದ್ದೀರಿ, ಏಕೆ ಎನ್ನತಕ್ಕಂಥದ್ದರ ಬಗ್ಗೆ ಹೇಳಬೇಕು ಎಂದಷ್ಟೇ ನಾವು ಕೇಳುತ್ತಿರುವುದು.

ಶ್ರೀ ಹೆಚ್.ಡಿ.ರೇವಣ್ಣ (ಲೋಕೋಪಯೋಗಿ ಸಚಿವರು): ಮಾನ್ಯ ಅಶೋಕ್‌ರವರು ಮಾತನಾಡುತ್ತಾ ಅವರೇನಾದರೂ ಮೈಸೂರು-ಬೆಂಗಳೂರು ಕಾರಿಡಾರ್ ರಸ್ತೆ ಬಗ್ಗೆ ವಿಧಾನಸಭೆಯಲ್ಲಿ ಮಾತನಾಡಿದರೆ ನೈಸ್ ಕಂಪನಿಯವರು ಇವರು ಜಮೀನು ಅಲ್ಲಿರುವುದರಿಂದ ಅದನ್ನು ಉಳಿಸಿಕೊಳ್ಳಲು ವಿಧಾನಸಭೆಯಲ್ಲಿ ಮಾತನಾಡುತ್ತಿದ್ದಾರೆ ಎಂದು ಸ್ಟೇಟ್‌ಮೆಂಟ್ ಮೀಡಿಯಾ ಮುಂದೆ ಕೊಟ್ಟಿದ್ದಾರೆ ಎಂದು ಹೇಳಿದರು. ನಾನು ಈ ಸದನದ ಎಲ್ಲಾ ಹಿರಿಯ ಸದಸ್ಯರುಗಳಲ್ಲಿ ನಾನು ಮನವಿ ಮಾಡುವುದಿಷ್ಟೆ. ಇಲ್ಲಿ ಯಾರದೇ ಇರಲಿ, ಅವರು ಇವರು ಎಂದೇನಿಲ್ಲ, ಯಾವುದೇ ಇದ್ದರೂ ನಾನು ಈ ಬಗ್ಗೆ ಹಲವಾರು ಬಾರಿ ವಿಧಾನಸಭೆಯಲ್ಲಿ ತಿಳಿಸಿದ್ದೇನೆ. ಯಾವುದೇ ಇದ್ದರೂ ನಾವು ಮುಟ್ಟುಗೋಲು ಹಾಕಿಕೊಳ್ಳುತ್ತೇವೆ. ಅದರಲ್ಲೇನೂ ಎರಡನೇ ಮಾತಿಲ್ಲ, ಈಗಾಗಲೇ ಮೊದಲನೆಯ ವರದಿಯನ್ನು ಕೊಟ್ಟಿದ್ದಾರೆ. ಸಮಿತಿಯಲ್ಲಿ ೧೮ ಜನ ಕಾರ್ಯದರ್ಶಿಗಳು ಇದ್ದಾರೆ. ಇನ್ನು ಎರಡನೆಯ ವರದಿ ಅಂತಿಮ ವರದಿ ೨೨ನೇ ತಾರೀಖು ಬಂದಿದೆ. ಆ ರಿಪೋರ್ಟನ್ನು ಮುಂದಿನ ಸಚಿವ ಸಂಪುಟ ಸಭೆಗೆ ತೆಗೆದುಕೊಂಡು ಹೋಗುತ್ತಿದ್ದೇವೆ. ಸಚಿವ ಸಂಪುಟ ಸಭೆಯಲ್ಲಿ ಏನು ತೀರ್ಮಾನವಾಗುತ್ತದೆಯೋ ಅದರಂತೆ ಮಾಡಲು ನಾವು ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡುತ್ತೇವೆ. ಈ ವಿಚಾರದಲ್ಲಿ ಯಾವುದೇ ದಾಕ್ಷಿಣ್ಯಕ್ಕೆ ಒಳಗಾಗುವುದಿಲ್ಲ, ಈಗಾಗಲೇ ನಾವು ಸದನದ ಒಳಗೆ ಹಾಗೂ ಹೊರಗೆ ಈ ಬಗ್ಗೆ ಹೇಳಿದ್ದೇವೆ. ಕಾನೂನಿನ ರೀತಿ ಇಡುವುದಕ್ಕೆ ಯಾವುದೇ ಅಡ್ಡಿಯಿಲ್ಲ. ಶ್ರೀರಾಮರೆಡ್ಡಿಯವರು ರಸ್ತೆ ಮಾಡುವುದಕ್ಕೆ ನಮ್ಮದೇನೂ ಅಡ್ಡಿಯಿಲ್ಲವೆಂದು ಹೇಳಿದರು. ನಾವೂ ಕೂಡ ಅಡ್ಡಿ ಮಾಡುತ್ತಿಲ್ಲ, ಆದರೆ ಕೆಲವು ಕೋರ್ಟ್ ವ್ಯಾಪ್ತಿಯಲ್ಲಿವೆ, ಕೆಲವು

ಕೋರ್ಟ್ ವ್ಯಾಪ್ತಿಯಿಂದ ಹೊರಗಡೆಯೂ ಇವೆ, ನಾವು ಉತ್ತರ ಹೇಳುವುದಕ್ಕೆ ಈ ಸಂದರ್ಭದಲ್ಲಿ ಕೋರ್ಟ್‌ನಲ್ಲಿರುವುದರಿಂದ ಅಸೆಂಬ್ಲಿಯಲ್ಲಿ ಉತ್ತರ ಹೇಳಲು ಸಾಧ್ಯವಾಗುವುದಿಲ್ಲ. ನ್ಯಾಯಾಲಯದ ವ್ಯಾಪ್ತಿಯಲ್ಲಿರದಿದ್ದರೆ ಈ ಬಗ್ಗೆ ಡಿಸ್‌ಕಶನ್ ಮಾಡಲು ಪೂರ್ಣ ಚರ್ಚೆ ಮಾಡುವುದಕ್ಕೆ ಒಂದು ದಿನ ತಾವು ಅವಕಾಶ ಕೊಟ್ಟರೆ ನಾನೂ ಕೂಡ ರೆಡಿ ಇದ್ದೇನೆ. ಅದರಲ್ಲಿ ಏನೇನಿದೆಯೋ ಆ ಬಗ್ಗೆ ಬೇಕಾದರೆ ಎಳೆಎಳೆಯಾಗಿ ಚರ್ಚೆಯಾಗಲಿ, ನಿರ್ಣಯ ಮಾಡಲಿ. ಏಕೆಂದರೆ ಇದರಲ್ಲಿ ಪಾರ್ಟಿ ವರ್ಶನ್ ಏನೂ ಇಲ್ಲ. ನಾವು ರಸ್ತೆ ಕೆಲಸವನ್ನು ಪ್ರಾಮಾಣಿಕವಾಗಿ ಮಾಡಿಸುವುದಕ್ಕೆ ನಮ್ಮದೇನೂ ಹಿಂದೇಟು ಇಲ್ಲ. ಆದರೆ ಕಾನೂನು ಬಿಟ್ಟು ಮಾಡಿರುವಂಥದ್ದಕ್ಕೆ ನಾವು ಅವಕಾಶ ಕೊಡುವುದಿಲ್ಲವೆಂದು ನಾನು ಮತ್ತೆ ಈ ಸದನದಲ್ಲಿ ಸ್ಪಷ್ಟಪಡಿಸುತ್ತಿದ್ದೇನೆ.

ಶ್ರೀ ಜೆ.ಸಿ.ಮಾಧುಸ್ವಾಮಿ : ಸರ್ಕಾರ ಆರ್ಡರ್.....

ಅಧ್ಯಕ್ಷರು : ನೋ, ನೋ ನಾನು ಈ ವಿಷಯ ಕ್ಲೋಸ್ ಮಾಡಿದ್ದೇನೆ. ಬಸವರಾಜ ರಾಯರೆಡ್ಡಿಯವರೆ ತಾವು ಪ್ರಶ್ನೆ ಕೇಳಿ.

ಶ್ರೀ ಜೆ.ಸಿ. ಮಾಧುಸ್ವಾಮಿ : ಅಸೆಂಬ್ಲಿಗೆ ಪ್ರಿವಿಲೇಜ್ ಆಗುತ್ತದೆ ಸಾರ್ ಇದು.

ಅಧ್ಯಕ್ಷರು : ಈಗ ಕ್ಲೋಸ್ ಮಾಡಿದ್ದೇನೆ. ನೀವು ಬೇಕಾದರೆ ಯಾವುದಾದರೂ ಒಂದು ನಿಯಮದ ಅಡಿಯಲ್ಲಿ ಕೇಳಿ. ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ಸರ್ಕಾರ ಆರ್ಡರ್ ಮಾಡಿ ಫೇಸ್ ಮಾಡುವುದಕ್ಕಾಗುವುದಿಲ್ಲ ಎಂದರೆ ಹೇಗೆ. ಇದು ಸದನಕ್ಕೆ ಗೌರವ ತರುವಂಥದ್ದಲ್ಲ. ನಾನು ನಿಮಗೆ ಹೇಳುತ್ತಿದ್ದೇನೆ. ಕೆ.ಸಿ.ರೆಡ್ಡಿ ವರದಿ ಅಲ್ಲಿಗೇ ನಿಲ್ಲಲಿಲ್ಲ. ಗೌವರ್ನಮೆಂಟ್ ಆದೇಶ...

ಅಧ್ಯಕ್ಷರು : ಇದನ್ನು ಬೇರೆ ನಿಯಮದಡಿ ಚರ್ಚೆಗೆ ತೆಗೆದುಕೊಂಡು ಬನ್ನಿ. ನಾನು ಬೇಕಾದರೆ ತಮಗೆ ಚರ್ಚೆಗೆ ಅವಕಾಶ ಕೊಡುತ್ತೇನೆ. ಆದರೆ ಈಗ ಪ್ರಶ್ನೋತ್ತರ ಕಾಲದಲ್ಲಿ ನೀವೆಲ್ಲಾ ನಿಂತುಕೊಂಡು ನೀವೆಲ್ಲಾ ಕ್ಲಾರಿಫಿಕೇಶನ್ ಕೇಳುವುದಕ್ಕೆ ಅವಕಾಶವಿಲ್ಲ. ದಯಮಾಡಿ ಯಾವುದಾದರೂ ನಿಯಮದಡಿಯಲ್ಲಿ ಚರ್ಚೆಗೆ ತೆಗೆದುಕೊಂಡು ಬನ್ನಿ.

ಶ್ರೀ ಬಸವರಾಜ ರಾಯರೆಡ್ಡಿ : ಮಾನ್ಯ ಅಧ್ಯಕ್ಷರೆ, ಉತ್ತರದಲ್ಲಿ ಮಾನ್ಯ ಸಚಿವರು ೨೦೦೪ ಮತ್ತು ೨೦೦೫ನೇ ಸಾಲಿನಲ್ಲಿ ಯೋಜನಾ ಆಯೋಗದ ವೆಚ್ಚ ೧೨೩೨ ಕೋಟಿ ರೂಪಾಯಿಗಳು ಎಂದು ಬಜೆಟನ್ನು ಮಂಡನೆ ಮಾಡಿದಂಥ ಸಂದರ್ಭದಲ್ಲಿ ಹೇಳಿದ್ದಾರೆ.